# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,
ವಾರ್ಡ್ ನಂ.40, ದೊಡ್ಡಬಿದರಕಲ್ಲು, ಕರಿಹೋಬನಹಳ್ಳಿ, ಬೆಂಗಳೂರು-5600 58.

---

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.40ರಲ್ಲಿ ದಿನಾಂಕ: 18.02.2022 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ. ಡಾ|| ಮುರಳಿಧರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಬಿ.ನಾಗಭೂಷಣ್ ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಶ್ರೀ.ಎಂ.ಚಂದ್ರಶೇಖರ್ ಆರೋಗ್ಯ ನಿರೀಕ್ಷಣಾಧಿಕಾರಿ, ಪಿ.ಹೆಚ್.ಸಿ, ತಿಪ್ಪೇನಹಳ್ಳಿ.
4. ಶ್ರೀರಮೇಶ್.ಡಿ.ಎಂ, ಹಿರಿಯ . ಆರೋಗ್ಯ ಪರಿವೀಕ್ಷಕರು.
5. ಶ್ರೀ.ಮುತ್ತೇಗೌಡ.ವಿ ಕಿರಿಯ ಆರೋಗ್ಯ ಪರಿವೀಕ್ಷಕರು.
6. ಶ್ರೀ.ಪರಮೇಶಯ್ಯ. ಕಿರಿಯ ಅಭಿಯಂತರರು, ಬೆಸ್ಕಾಂ, ದೊಡ್ಡಬಿದರಕಲ್ಲು.
7. ಶ್ರೀ.ಶಶಿಧರ್.ಎಸ್.ಆರ್. ಕಿರಿಯ ಅಭಿಯಂತರರು, ಬೆಸ್ಕಾಂ, ಅಂದ್ರಹಳ್ಳಿ.
8. ಶ್ರೀ.ಆದಿನಾರಾಯಣ.ಜಿ, ಸಹಾಯಕ ಅಭಿಯಂತರರು, ಬೆಸ್ಕಾಂ, ಅಂದ್ರಹಳ್ಳಿ.
9. ಶ್ರೀ.ಗವಿಸಿದ್ದಯ್ಯ, ಸಹಾಯಕ ಅಭಿಯಂತರರು, ವಿದ್ಯುತ್ (ಬಿ.ಬಿ.ಎಂ.ಪಿ).
10. ಶ್ರೀ.ಎಸ್.ಟಿ.ಸುರೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ (ಎಸ್.ಟಿ.ಪಿ).
11. ಶ್ರೀ.ಆನಂದ್ ಪಾಡಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ (ಪ್ರಾಜೆಕ್ಟ್).
12. ಶ್ರೀ.ಪವನ್.ಎಂ.ಟಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
13. ಶ್ರೀ.ಕೆ.ಶ್ರೀನಿವಾಸಯ್ಯ, ಸಹ ಕಂದಾಯ ಅಧಿಕಾರಿ, ಕಂದಾಯ ಇಲಾಖೆ.
14. ಶ್ರೀ.ಗುರುರಾಜ್.ಎ. ಕಂದಾಯ ಪರಿವೀಕ್ಷಕಕರು, ದೊಡ್ಡಬಿದರಕಲ್ಲು.
15. ಶ್ರೀಮತಿ.ಅಶ್ವಿನಿ ಮಾಂಡ್ರೆ. ಕಂದಾಯ ವಸೂಲಿಗಾರರು, ದೊಡ್ಡಬಿದರಕಲ್ಲು.
16. ಶ್ರೀ.ಕುಮಾರ್, ಕಂದಾಯ ಪರಿವೀಕ್ಷಕಕರು, ಹೊಸಹಳ್ಳಿ.
17. ಶ್ರೀ.ರವಿ, ಕಂದಾಯ ಪರಿವೀಕ್ಷಕಕರು, ಅಂದ್ರಹಳ್ಳಿ.
18. ಶ್ರೀ.ಸಂತೋಷ್ ಕುಮಾರ್, ಕಂದಾಯ ವಸೂಲಿಗಾರರು, ಕರಿಹೋಬನಹಳ್ಳಿ.
19. ಶ್ರೀ.ಕೃಷ್ಣಮೂರ್ತಿ.ಎನ್, ಕಂದಾಯ ವಸೂಲಿಗಾರರು, ಕರಿಹೋಬನಹಳ್ಳಿ.
20. ಶ್ರೀ.ಚಿಕ್ಕಹನುಮಯ್ಯ, ಕಂದಾಯ ಪರಿವೀಕ್ಷಕಕರು.
21. ಶ್ರೀ.ಶ್ರೀನಿವಾಸ.ಸಿ.ಪಿ, ವ್ಯವಸ್ಥಾಪಕರು, ಕಲ್ಯಾಣ ಇಲಾಖೆ.
22. ಶ್ರೀ.ಡಾ||.ಹೆಚ್.ಆರ್.ಪುಟ್ಟರಾಜು, ಪರಿಸರ ಅಧಿಕಾರಿ, ಮಾಲಿನ್ಯ ನಿಯಂತ್ರಣಾ ಮಂಡಳಿ.
23. ಶ್ರೀ.ಷಣ್ಮುಖಪ್ಪ, ಮೇಸ್ತ್ರಿ, ತೋಟಗಾರಿಕೆ ಇಲಾಖೆ.
24. ಶ್ರೀ.ವಿವೇಕ್.ಎಂ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
25. ಶ್ರೀ.ಯೋಗೇಶ್.ಕೆ.ಆರ್, ಮಾರ್ಷಲ್. ದೊಡ್ಡಬಿದರಕಲ್ಲು.
26. ಶ್ರೀ. ಮಂಜುನಾಥ್.ಆರ್, ಮಾರ್ಷಲ್. ದೊಡ್ಡಬಿದರಕಲ್ಲು.

ವಾರ್ಡ್ ಸಮಿತಿ ಸದಸ್ಯರುಗಳು.

1. ಶ್ರೀ.ಕೂರ್ಲಪ್ಪ, ತಿಗಳರಪಾಳ್ಯ, ಸದಸ್ಯರು.
2. ಶ್ರೀ.ಸತೀಶ್, ಹೊಸಹಳ್ಳಿ, ಸದಸ್ಯರು
3. ಶ್ರೀ.ಮಾಲತೇಶ್.ಹೆಚ್.ಟಿ, ದೊಡ್ಡಬಿದರಕಲ್ಲು, ಸದಸ್ಯರು.
4. ಶ್ರೀ.ಮುನಿನಾರಾಯಣಪ್ಪ, ಇಂದಿರಾನಗರ, ಸದಸ್ಯರು.
5. ಶ್ರೀ.ನಟರಾಜ್, ವಿದ್ಯಾಮಾನ್ಯನಗರ, ಸದಸ್ಯರು.
6. ಶ್ರೀಮತಿ.ಮಂಗಳಮ್ಮ, ಮಾರಣ್ಣ ಬಡಾವಣೆ, ಸದಸ್ಯರು.
7. ಶ್ರೀಮತಿ.ಸುಮಿತ್ರಮ್ಮ, ಸಾಯಿಬಾಬಾ ಲೇಔಟ್, ಸದಸ್ಯರು.

**ಈ ಕೆಳಕಂಡ ಅಧಿಕಾರಿಗಳು ಸಭೆಯಲ್ಲಿ ಗೈರು ಹಾಜರಾಗಿರುತ್ತಾರೆ.**

1. ಶ್ರೀ.ರಮೇಶ್, ಪಶು ವೈದ್ಯರು.
2. ಶ್ರೀ.ಭಾನುಪ್ರಕಾಶ್, ಅರಣ್ಯ ಇಲಾಖೆ.
3. ಶ್ರೀಮತಿ ಮೇಘನಾ.ಬಿ.ಕೆ, ಸಹಾಯಕ ಅಭಿಯಂತರರು, ಕೆರೆಗಳ ವಿಭಾಗ, ರಾ.ರಾ.ನಗರ.ವಲಯ.
4. ಶ್ರೀ ಎಂ.ಅಮರನಾಥ್, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
5. ಆರಕ್ಷಕ ನಿರೀಕ್ಷಕರು, ಪೀಣ್ಯ ಪೊಲೀಸ್ ಠಾಣೆ.
6. ಆರಕ್ಷಕ ನಿರೀಕ್ಷಕರು, ಬ್ಯಾಡರಹಳ್ಳಿ ಪೊಲೀಸ್ ಠಾಣೆ.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯಲ್ಲಿ ಎಲ್ಲಾ ಸದಸ್ಯರುಗಳು ಹಾಗೂ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯ ಉದ್ದೇಶವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳು ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

1) **ವಾರ್ಡ್ ವ್ಯಾಪ್ತಿಯಲ್ಲಿನ ಆರೋಗ್ಯ ಇಲಾಖೆ ಬಗ್ಗೆ ಚರ್ಚಿಸಲಾದ ವಿಚಾರ.**

- ವಾರ್ಡ್ ವ್ಯಾಪ್ತಿಯಲ್ಲಿನ ತಿಪ್ಪೇನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಂಬಂಧಿಸಿದಂತೆ ಚಂದ್ರಶೇಖರ್, ಆರೋಗ್ಯ ನಿರೀಕ್ಷಣಾಧಿಕಾರಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿನ ಎಲ್ಲಾ ಸ್ಥಳಗಳಿಗೆ ಕೋವಿಡ್ ಟೆಸ್ಟ್ ಕ್ಯಾಂಪ್‌ಗಳನ್ನು ಮಾಡಲಾಗುತ್ತದೆ ಎಂದು ತಿಳಿಸಿದರು. ಪ್ರತಿನಿತ್ಯ ಸುಮಾರು 200 ಟೆಸ್ಟ್‌ಗಳನ್ನು ಮಾಡಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು.
- ಚಂದ್ರಶೇಖರ್, ಆರೋಗ್ಯ ನಿರೀಕ್ಷಣಾಧಿಕಾರಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ 3ನೇ ಅಲೆಗೆ ಸಂಭಂದಿಸಿದಂತೆ, ಒಟ್ಟು 03 ಪ್ರಕರಣಗಳಿದ್ದು, 1 ಸಾವು ಆಗಿರುತ್ತದೆ ಎಂದು ತಿಳಿಸಿದರು.
- ವ್ಯಾಕ್ಸಿನೇಷನ್ ಗೆ ಸಂಬಂಧಿಸಿದಂತೆ ಮೊದಲನೇ ಡೋಸ್ ಒಟ್ಟು 78082, ಎರಡನೇ ಡೋಸ್ 70891 ಹಾಗೂ ಬೂಸ್ಟರ್ ಡೋಸ್ 850 ಜನರಿಗೆ ಲಸಿಕೆಯನ್ನು ನೀಡಲಾಗಿರುತ್ತದೆ.
- ವಾರ್ಡ್ ವ್ಯಾಪ್ತಿಯಲ್ಲಿನ ಸಿದ್ದಾರ್ಥ, ಅಹಂ ಆದ್ಯ, ಸಿದ್ದಾರ್ಥ, ಸನ್ ಶೈನ್, ಪುಟ್ಟಣ್ಣ ಮತ್ತು ದೀಪಕ್ ಶಾಲೆಗಳನ್ನು ಒಟ್ಟು ಉಳಿದೆಲ್ಲಾ ಶಾಲೆಗಳಲ್ಲಿ ಕೋವಿಡ್ ಲಸಿಕೆಯನ್ನು ಯಶಸ್ವಿಯಾಗಿ ನೀಡಲಾಗಿರುತ್ತದೆ.
- ದಿನಾಂಕ: 27/02/2022 ರಿಂದ 02/03/2022 ರವರೆಗೆ ಪಲ್ಸ್ ಪೋಲಿಯೋ ಅಭಿಯಾನವಿದ್ದು, ವಾರ್ಡ್ ವ್ಯಾಪ್ತಿಯ ಒಟ್ಟು 30 ಬೂತ್‌ಗಳಲ್ಲಿ ವಿತರಿಸಲಾಗುವುದು ಎಂದು ತಿಳಿಸಿದರು. ಸದರಿ ಕಾರ್ಯಕ್ರಮಕ್ಕೆ ವಾರ್ಡ್ ಕಮಿಟಿ ಸದಸ್ಯರೆಲ್ಲರೂ ಪೂರ್ಣ ಸಹಕಾರವನ್ನು ನೀಡಿ ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದು ಕೋರಿದರು.
- ಪ್ರತಿ ಸೋಮವಾರ ಮತ್ತು ಶುಕ್ರವಾರದೊಂದು ಗರ್ಭಿಣಿ ಸ್ತ್ರೀಯರ ತಪಾಷಣೆ ಮಾಡಲಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಸಹಜ ಸಾವುಗಳಿಗೆ ಸಂಬಂಧಿಸಿದಂತೆ ಮರಣ ಪ್ರಮಾಣ ಪತ್ರ ನೀಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಚರ್ಚಿಸಲಾಗಿ ಮುಂದಿನ ಹಂತದಲ್ಲಿ ಈ ಬಗ್ಗೆ ಸೂಕ್ತ ಕ್ರಮಗೊಳ್ಳಲು ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.
- ಕಿರಿಯ ಆರೋಗ್ಯ ಪರಿವೀಕ್ಷಕರಾದ ಮುತ್ತೇಗೌಡರವರು ಮಾತನಾಡಿ ವಾರ್ಡ್ ನಂ.40 ಅಭಿವೃದ್ಧಿಹೊಂದುತ್ತಿರುವ ವಾರ್ಡ್ ಆಗಿದ್ದು, ಈಗಾಗಲೇ ಅನೇಕ ಹೊಸ ಕಟ್ಟಡಗಳು ನಿರ್ಮಾಣವಾಗಿರುತ್ತವೆ. ಆದುದರಿಂದ ಇನ್ನು ಹೆಚ್ಚಿನ ಸಿಬ್ಬಂದಿಗಳು ಹಾಗೂ ವಾಹನಗಳ ಅವಶ್ಯಕತೆ ಇದೆ ಎಂದು ಸಭೆಯಲ್ಲಿ ತಿಳಿಸಿದರು. ನಂತರ ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್‌ನಲ್ಲಿರುವ ಒಟ್ಟು ಮನೆಗಳನ್ನು ಸರ್ವೆ ಮಾಡಿ ಅಗತ್ಯ ಇರುವ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

2) **ವಾರ್ಡ್ ವ್ಯಾಪ್ತಿಯಲ್ಲಿನ ಮಾಲಿನ್ಯ ನಿಯಂತ್ರಣ ಮಂಡಳಿಯವರು ಚರ್ಚಿಸಲಾದ ವಿಷಯಗಳು**

- ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಂಬಂಧಿಸಿದಂತೆ ಪರಿಸರ ಅಧಿಕಾರಿಗಳಾದ ಡಾ॥ ಹೆಚ್.ಆರ್.ಪುಟ್ಟರಾಜು ರವರು ಮಾತನಾಡಿ ವಾರ್ಡ್ ನಂ.40 ಮಿಶ್ರಿತ ವಲಯವಾಗಿದ್ದು, ಇಲ್ಲಿ ಕೈಗಾರಿಕೆ ಪ್ರದೇಶ ಹಾಗೂ ವಸತಿ

ಪ್ರದೇಶಗಳು ಹೊಂದಿಕೊಂಡಿದ್ದು, ಕೇವಲ ಹೊರಸೂಸುವ ಕಾರ್ಖಾನೆಗಳು ನಮ್ಮ ವ್ಯಾಪ್ತಿಗೆ ಒಳಪಡುವುದಾಗಿ ಸೂಚಿಸಿದರು.

- 2000 ಚದರ ಮೀ. ಹಾಗೂ 20ಕ್ಕಿಂತ ಹೆಚ್ಚು ವಸತಿ ಗೃಹ ಹೊಂದಿರುವ ಕಟ್ಟಡಗಳು ಸ್ವಂತ ಎಸ್.ಜಿ.ಟಿ ಹೊಂದಿರುವುದು ಕಡ್ಡಾಯವಾಗಿರುತ್ತದೆ. ಎಂದು ಡಾ॥ ಹೆಚ್.ಆರ್.ಪುಟ್ಟರಾಜು ರವರು ಸಭೆಯಲ್ಲಿ ತಿಳಿಸಿದರು. ಹಾಗೂ ಅನಧಿಕೃತ ಕೈಗಾರಿಕಾ ತ್ಯಾಜ್ಯ ವಿಲೇವಾರಿ ಮಾಡುವವರಿಗೆ ಮೊದಲ ಹಂತದಲ್ಲಿ ದಂಡ ವಿಧಿಸಿ ಹಾಗೂ ಮುಂದಿನ ಹಂತದಲ್ಲಿ ನೋಟೀಸ್ ನೀಡುವ ಮೂಲಕ ಎಚ್ಚರಿಕೆ ನೀಡುವುದಾಗಿ ಸಭೆಯಲ್ಲಿ ತಿಳಿಸಿದರು.
- ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಕಾರ್ಖಾನೆಗಳ ಸಂಪೂರ್ಣ ಮಾಹಿತಿಯ ವರದಿ ನೀಡುವಂತೆ ಪರಿಸರ ಅಧಿಕಾರಿಗಳಾದ ಡಾ॥ ಹೆಚ್.ಆರ್.ಪುಟ್ಟರಾಜು ರವರಿಗೆ ಸೂಚಿಸಿದರು.
- ಸದಸ್ಯರುಗಳು ಮಾತನಾಡಿ ಕೆಲವು ಕಾರ್ಖಾನೆಗಳು ಅತಿಯಾದ ಶಬ್ದ ಮಾಲಿನ್ಯ ಮಾಡುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ನಂತರ ಡಾ॥ ಹೆಚ್.ಆರ್.ಪುಟ್ಟರಾಜು ರವರು ಮಾತನಾಡಿ ಸದರಿ ದೂರುಗಳು ವ್ಯಾಪಾರ ಪರವಾನಿಗೆ ನೀಡುವ ಅಧಿಕಾರಿಗಳ ವ್ಯಾಪ್ತಿಗೆ ಒಳಪಡುವುದಾಗಿ ತಿಳಿಸಿದರು.

**3) ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ಸಹ ಕಂದಾಯ ಅಧಿಕಾರಿಗಳಾದ ಶ್ರೀ ಶ್ರೀನಿವಾಸಯ್ಯರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು 24 ಕೋಟಿ 74 ಲಕ್ಷ ಕಂದಾಯ ಸಂಗ್ರಹಣೆಯ ಗುರಿ ಇದ್ದು, ಈಗಾಗಲೇ 14 ಕೋಟಿ 76 ಲಕ್ಷ ಕಂದಾಯ ವಸೂಲಿ ಮಾಡಲಾಗಿರುತ್ತದೆ. ಹಾಗೂ ಸುಮಾರು 10 ಕೋಟಿಯಷ್ಟು ಕಂದಾಯ ವಸೂಲಾತಿ ಬಾಕಿ ಇರುತ್ತದೆ. ಎಂದು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಬ್ಲೂಜೆ ಬಡಾವಣೆಯಲ್ಲಿ ಒಟ್ಟು 96 ಎಕರೆ ಜಾಗವಿದ್ದು, ಬಿ.ಡಿ.ಎ ಇಲಾಖೆರವರು ಕಂದಾಯ ವಸೂಲಿ ಮಾಡುತ್ತಿರುವುದಾಗಿ, ಸಹ ಕಂದಾಯ ಅಧಿಕಾರಿಗಳಾದ ಶ್ರೀ ಶ್ರೀನಿವಾಸಯ್ಯರವರು ಸಭೆಯಲ್ಲಿ ಸೂಚಿಸಿದರು. ನಂತರ ನೋಡಲ್ ಅಧಿಕಾರಿಗಳು ಮಾತನಾಡಿ ಬ್ಲೂಜೆ ಬಡಾವಣೆಯನ್ನು ಬಿಬಿಎಂಪಿ ವ್ಯಾಪ್ತಿಗೆ ತರಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.
- ಸದಸ್ಯರುಗಳು ಮಾತನಾಡಿ ಈಗಾಗಲೇ ಹಿಂದಿನ ಸಭೆಗಳಲ್ಲಿ ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಸರ್ಕಾರಿ ಜಾಗಗಳನ್ನು ಸರ್ವೇ ಮಾಡಿ ಹದ್ದುಬಸ್ತು ಗುರುತಿಸುವಂತೆ ಚರ್ಚಿಸಲಾಗಿತ್ತು. ಆದರೆ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸಭೆಗೆ ತಿಳಿಸಿದರು, ನಂತರ ನೋಡಲ್ ಅಧಿಕಾರಿಗಳು ಮಾತನಾಡಿ ಸರ್ಕಾರಿ ಜಾಗಗಳನ್ನು ಗುರುತಿಸಲು ಒಬ್ಬ ಸಿಬ್ಬಂದಿಯನ್ನು ನೇಮಕ ಮಾಡುವಂತೆ ಸಹ ಕಂದಾಯ ಅಧಿಕಾರಿಗಳಾದ ಶ್ರೀ ಶ್ರೀನಿವಾಸಯ್ಯರವರಿಗೆ ಸೂಚಿಸಿದರು. ಹಾಗೂ ಮುಂದಿನ ಸಭೆಗೆ ಸಹ ನಿರ್ದೇಶಕರು ಭೂದಾಖಲೆ ರವರನ್ನು ಅಹ್ವಾನಿಸುವಂತೆ ತಿಳಿಸಿದರು.

**4) ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಗ್ಗೆ ಚರ್ಚಿಸಲಾದ ವಿಷಯಗಳು**

- ಭವಾನಿ ನಗರದಲ್ಲಿ ಎಲ್&ಟಿ ವತಿಯಿಂದ ಒಳಚರಂಡಿ ಕಾಮಗಾರಿ ದೂಷಪೂರಿತವಾಗಿದೆ. ಎಂದು ಸದಸ್ಯರು ತಿಳಿಸಿದರು. ನಂತರ ನೋಡಲ್ ಅಧಿಕಾರಿಗಳು ಮಾತನಾಡಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಾದ ಶ್ರೀ ಪವನ್‌ರವರಿಗೆ ಸೂಚಿಸಿದರು.
- ವಾರ್ಡ್ ಸಹಾಯಕ ಅಭಿಯಂತರರಾದ ಶ್ರೀ ನಾಗಭೂಷಣ್‌ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ಪ್ರಾರಂಭವಾಗಿದ್ದು, ಒಳ ಚರಂಡಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಾದ ಶ್ರೀ ಪವನ್‌ರವರಿಗೆ ತಿಳಿಸಿದರು.
- ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಾದ (ಪ್ರಾಜೆಕ್ಟ್) ಶ್ರೀ ಆನಂದ್ ರವರು ಮಾತನಾಡಿ ಶ್ಯಾಮಲ ಸಿದ್ದಗಂಗಯ್ಯ ಕನ್ವೆನ್ಷನ್ ಹಾಲ್ ನಿಂದ ಕರಿವೋಬನ ಹಳ್ಳಿ ವರೆಗೆ ರಸ್ತೆ ಪುನರ್‌ಚೇತನ ಕಾಮಗಾರಿ ನಡೆಸಿದ್ದು, ಬಾಕಿ ಇರುವ ಸ್ಥಳಗಳಲ್ಲಿ ಮುಂದಿನ ವಾರದಲ್ಲಿ ಮಾಡಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

**5) ವಾರ್ಡ್ ವ್ಯಾಪ್ತಿಯಲ್ಲಿನ ವಿದ್ಯುತ್ ಇಲಾಖೆ (ಬಿಬಿಎಂಪಿ)ಬಗ್ಗೆ ಚರ್ಚಿಸಲಾದ ವಿಷಯಗಳು**

- ಸಹಾಯಕ ಅಭಿಯಂತರರಾದ ಶ್ರೀ ಗವಿಸಿದ್ದಯ್ಯರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹೊಸ ಬೀದಿ ದೀಪಗಳು ಮಂಜೂರಾಗಿದ್ದು, ತಾಂತ್ರಿಕ ಮಂಜೂರಾತಿ ಕೆಲಸಗಳು ಪ್ರಗತಿಯಲ್ಲಿರುತ್ತವೆ ಎಂದು ಸಭೆಯಲ್ಲಿ ತಿಳಿಸಿದರು.
- ಶ್ರೀ ಗವಿಸಿದ್ದಯ್ಯರವರು ಮಾತನಾಡಿ ಕೇವಲ ಖಾಲಿ ಇರುವ ಕಂಬಗಳಿಗೆ ಮಾತ್ರ ಹೊಸ ಬೀದಿ ದೀಪಗಳನ್ನು ಅಳವಡಿಸಲಾಗುವುದು. ಹಾಗೂ ಈಗಾಗಲೇ ಚಾಲ್ತಿಯಲ್ಲಿರುವ ಬೀದಿ ದೀಪಗಳನ್ನು ಹಾಗೆಯೇ ಮುಂದುವರಿಸಲಾಗುವುದೆಂದು ತಿಳಿಸಿದರು.

**6) ವಾರ್ಡ್ ವ್ಯಾಪ್ತಿಯಲ್ಲಿನ ಬೆಸ್ಕಾಂ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ಬೆಸ್ಕಾಂ ಇಲಾಖೆಗೆ ಸಂಬಂಧಿಸಿದಂತೆ ಹಿಂದಿನ ಸಭೆಯಲ್ಲಿ ರಸ್ತೆಯಲ್ಲಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಬೇಕೆಂದು ಚರ್ಚಿಸಲಾಗಿದ್ದು, ಅದರಂತೆ ಎಲ್ಲಾ ವಿದ್ಯುತ್ ಕಂಬಳನ್ನು ಸ್ಥಳಾಂತರಿಸಲಾಗಿದೆ ಎಂದು ಸಂಬಂಧ ಪಟ್ಟ ಅಭಿಯಂತರರುಗಳು ಸಭೆಯಲ್ಲಿ ತಿಳಿಸಿದರು.
- ಸದಸ್ಯರುಗಳು ಮಾತನಾಡಿ ಅಂದ್ರಹಳ್ಳಿ ವ್ಯಾಪ್ತಿಯಲ್ಲಿ ಪದೆ ಪದೆ ವಿದ್ಯುತ್ ಕಡಿತವಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ನಂತರ ನೋಡಲ್ ಅಧಿಕಾರಿಗಳು ಮಾತನಾಡಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟ ಬೆಸ್ಕಾಂ ಅಭಿಯಂತರರಿಗೆ ಸೂಚಿಸಿದರು.

**7) ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ಸಹಾಯಕ ಅಭಿಯಂತರರಾದ ಶ್ರೀ ನಾಗಭೂಷಣ್ ರವರು ಮಾತನಾಡಿ ನೀರು ಸರಬರಾಜು ಸರಬರಾಜು ಉದ್ದೇಶಕ್ಕಾಗಿ ಒಟ್ಟು 4 ಟ್ಯಾಂಕರ್‌ಗಳನ್ನು ಇರಿಸಲಾಗಿದೆ. ಎಂದು ಸಭೆಯಲ್ಲಿ ತಿಳಿಸಿದರು.
- ಸಹಾಯಕ ಅಭಿಯಂತರರಾದ ಶ್ರೀ ನಾಗಭೂಷಣ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ರಸ್ತೆ ಡಾಂಬರೀಕರಣ ಕಾಮಗಾರಿ ಆರಂಭವಾಗಿದ್ದು, ಯಾವುದೇ ರಸ್ತೆ ಅಗೆತ ಮಾಡುವ ಮುನ್ನ ಅನುಮತಿ ಪಡೆದು ಮಾಡಬೇಕು ಇಲ್ಲವಾದಲ್ಲಿ ಅವರ ಮೇಲೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಗುವುದು.
- ಸದಸ್ಯರುಗಳು ಮಾತನಾಡಿ ಹೊರಗುತ್ತಿಗೆ ನೀರು ಗಂಟಿಗಳಿಗೆ ಸಂಬಂಧಿಸಿದಂತೆ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೊರಗುತ್ತಿಗೆ ನೀರುಗಂಟಿಗಳನ್ನು ಪರಿಗಣನೆಗೆ ತೆಗೆದುಕೊಂಡು ಬಿಬಿಎಂಪಿಗೆ ನೇಮಕ ಮಾಡಲು ಕ್ರಮ ಕೈಗೊಳ್ಳಬೇಕೆಂದು ಸದಸ್ಯರುಗಳು ಸಭೆಯಲ್ಲಿ ಚರ್ಚಿಸಿದರು.

**8) ವಾರ್ಡ್ ವ್ಯಾಪ್ತಿಯಲ್ಲಿನ ಎಸ್.ಟಿ.ಪಿ(ಬಿ.ಡಬ್ಲ್ಯೂ.ಎಸ್.ಎಸ್.ಬಿ) ಬಗ್ಗೆ ಚರ್ಚಿಸಲಾದ ವಿಷಯಗಳು**

- ಎಸ್.ಟಿ.ಪಿ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ಎಸ್.ಬಿ.ಸುರೇಶ್ ರವರು ಮಾತನಾಡಿ ನಾಗಸಂದ್ರದಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಎಸ್.ಟಿ.ಪಿಗೆ ಸಂಬಂಧಿಸಿದಂತೆ ಸದರಿ ಘಟಕದಲ್ಲಿ ಶುದ್ಧೀಕರಿಸಿದ ನೀರನ್ನು ದೊಡ್ಡಬಿದರಕಲ್ಲು ಕೆರೆಗೆ ಬಿಡಲು ಪಂಪ್‌ಸೆಟ್ ಅವಶ್ಯಕತೆ ಇದ್ದು, ಇದಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿ ತಯಾರಿಸಿ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.
- ಸದರಿ ಘಟಕದಲ್ಲಿ ತಯಾರಾಗುವ ಗೊಬ್ಬರವನ್ನು ರೈತರಿಗೆ ಉಚಿತವಾಗಿ ನೀಡಲಾಗುವುದು. ಎಂದು ಶ್ರೀ ಎಸ್.ಬಿ.ಸುರೇಶ್ (ಸ.ಕಾ.ಅ) ರವರು ಸಭೆಯಲ್ಲಿ ತಿಳಿಸಿದರು.

9) ವಾರ್ಡ್ ವ್ಯಾಪ್ತಿಯಲ್ಲಿನ ಕಲ್ಯಾಣ ಶಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು

- ಈ ಬಾರಿಯ ಕಲ್ಯಾಣ ಶಾಖೆಯ ಯೋಜನೆಗಳನ್ನು ಸಭೆಯಲ್ಲಿ ಚರ್ಚಿಸಿ ಫಲಾನುಭವಿಗಳನ್ನು ಗುರುತಿಸುವಂತೆ ನೋಡಲ್ ಅಧಿಕಾರಿಗಳು ಸಂಬಂಧ ಪಟ್ಟ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು.

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.40, ದೊಡ್ಡಬಿದರಕಲ್ಲು

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.40, ದೊಡ್ಡಬಿದರಕಲ್ಲು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

ಅಧಿಕಾರಿಗಳ ಮಾಹಿತಿಗಾಗಿ

1. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ. ರವರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
3. ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
4. ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಕೆಂ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ ರವರ ಮಾಹಿತಿಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರ ಮಾಹಿತಿಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ ರವರ ಮಾಹಿತಿಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
13. ವಲಯ ಅರಣ್ಯಾಧಿಕಾರಿಗಳು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳು ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
15. ತೋಟಗಾರಿಕೆ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
16. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.40, ದೊಡ್ಡಬಿದರಕಲ್ಲು ರವರ ಮಾಹಿತಿಗಾಗಿ ಕಳುಹಿಸಿದೆ.
17. ಪೋಲೀಸ್ ಇನ್‌ಸ್ಪೆಕ್ಟರ್, ಪೀಣ್ಯ/ಬ್ಯಾಡರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
18. ಪರಿಸರ ಅಧಿಕಾರಿಗಳು ಮಾಲಿನ್ಯ ನಿಯಂತ್ರಣ ಮಂಡಳಿ ರವರ ಮಾಹಿಗಾಗಿ ಕಳುಹಿಸಿದೆ.